**ಸಾಕ್ಷಿಗೆ ದಿನಾಂಕ:09-04-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರಿದ ಪಾಟೀ ಸವಾಲು :: ವಾದಿ ಪರ ಶ್ರೀ.ಕೆ.ಆರ್.ಎಸ್ ವಕೀಲರಿಂದ ::**

ನನ್ನ ತಂದೆ ಭೂ ನ್ಯಾಯ ಮಂಡಳಿಯ ಮುಂದೆ ಸರ್ವೆ ನಂ.9 ರ ಜಮೀನಿನಲ್ಲಿ ತಾನು ಸಾಗುವಳಿ ಮಾಡುತ್ತಿಲ್ಲ ಎಂಬುದಾಗಿ ಹೇಳಿಕೆ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಒ.ಎಸ್ ನಂ.115/2004 ರಲ್ಲಿ ಸದರಿ ನನ್ನ ತಂದೆ ಭೂ ನ್ಯಾಯ ಮಂಡಳಿಯ ಮುಂದೆ ನೀಡಿದ ಹೇಳಿಕೆಯ ದಾಖಲೆಗಳನ್ನು ತೋರಿಸಿದಾಗ ಅದನ್ನು ನಾನು ಒಪ್ಪಿದ್ದರಿಂದ ಆ ದಾವೆಯಲ್ಲಿ ಸದರಿ ದಾಖಲೆ ನಿಡಿ-1 ಎಂದು ನಿಶಾನೆಗೊಂಡಿತ್ತು ಎಂದರೆ ನನಗೆ ಗೊತ್ತಿಲ್ಲ. ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆ ಧೃಡೀಕೃತ ಪ್ರತಿಯಾಗಿದ್ದು, ಅದನ್ನು ನನ್ನ ತಂದೆ 1975 ನೇ ಇಸವಿಯಲ್ಲಿ ಕಂದಾಯ ಮಂತ್ರಿಗಳಿಗೆ ಬರೆದ ಪತ್ರವಾಗಿತ್ತು ಎಂದರೆ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಒಪ್ಪಿರುತ್ತಾರೆ ಅದನ್ನು ***ನಿಪಿ -22*** ಎಂದು ಗುರುತಿಸಲಾಯಿತು.

2. ನಿಪಿ-9 ನನ್ನ ತಂದೆ ವಿಶೇಷ ಇನಾಮ್ ರದ್ಧಿಯಾತಿ ಕಮಿಷನರ್ ರವರ ಸಮಕ್ಷಮ ಸಲ್ಲಿಸಿದ ಅರ್ಜಿಯಾಗಿರುತ್ತದೆ ಎಂದರೆ ಸರಿ. ನಿಪಿ-9 ರಲ್ಲಿ ನಮೂದಿಸಿದ ಆಸ್ತಿ ನನ್ನ ತಂದೆಯ ಹೆಸರಿಗೆ ಮಂಜೂರಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು, ಸರ್ವೆ ನಂ.9 ರ ಜಮೀನನ್ನು ಸಹ ತನಗೆ ಮಂಜೂರು ಮಾಡುವಂತೆ ಕೋರಿ ನನ್ನ ತಂದೆ ಅರ್ಜಿಯನ್ನು ಸಲ್ಲಿಸಿದ್ದು, ಅದು ಈ ವರೆವಿಗೂ ಇತ್ಯರ್ಥ ಆಗಿಲ್ಲ. ಸದರಿ ಅರ್ಜಿ ಯಾವ ಅಧಿಕಾರಿಯ ಸಮಕ್ಷಮ ವಿಲೇಗಾಗಿ ಉಳಿದಿದೆ ಎಂದು ನನಗೆ ಗೊತ್ತಿಲ್ಲ. ನಾನು ಸದರಿ ಅರ್ಜಿಯ ವಿಚಾರವಾಗಿ ಸಮಕ್ಷಮ ಅಧಿಕಾರಿಗಳ ಸಮ್ಮುಖದಲ್ಲಿ ಭೂ ಸುಧಾರಣಾ ಕಾಯಿದೆ ಜಾರಿಗೆ ಬಂದ ಸಂದರ್ಭದಲ್ಲಿ ಹಾಜರಾಗಿದ್ದೆ.

3. ಸರ್ವೆ ನಂ.9 ರ ಜಮೀನಿಗೆ ಸಂಬಂಧಿಸಿದ ಮಂಜೂರಾತಿ ಅರ್ಜಿ ವಿಚಾರಣೆಗೆ ಬಾಕಿ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.10 ರಲ್ಲಿ ನನ್ನ ತಂದೆಯ ಹೆಸರಿಗೆ ಮಂಜೂರಾದ ಜಮೀನನ್ನು ಈ ವರೆವಿಗೂ ಅಳತೆ ಮಾಡಿಸಿಲ್ಲ. ಒ.ಎಸ್.ನಂ.115/2004 ಚಿಕ್ಕಮಗಳೂರಿನ ನ್ಯಾಯಾಲಯದಲ್ಲಿ ಸಲ್ಲಿಸಿದ ಸದರಿ ದಾವೆಯ ಸಂದರ್ಭದಲ್ಲಿ ನಾನು ಸರ್ವೆ ನಂ. 10 ರಲ್ಲಿರುವ ನಮ್ಮ ಜಮೀನನ್ನು ಖಾಸಗಿ ಸರ್ವೇಯರ್ ನಿಂದ ಅಳತೆ ಮಾಡಿಸಿದ್ದೆ.

4. ಆ ಸಂದರ್ಭದಲ್ಲಿ ದಾವಾ ಸ್ವತ್ತು ಸರ್ವೆ ನಂ.9 ರಲ್ಲಿ ಇದೆ ಎಂಬ ವಿಚಾರ ನನಗೆ ತಿಳಿಯಿತು ಎಂದರೆ ಸರಿ. ವಾದಿಗಳ ತಂದೆ-ತಾಯಿ ಸದರಿ ಸರ್ವೆ ನಂ.9 ರಲ್ಲಿರುವ ಜಮೀನನ್ನು ತಮಗೆ ಬಿಟ್ಟುಕೊಡುವಂತೆ ಕೇಳಿರಲಿಲ್ಲ. ಒ.ಎಸ್ ನಂ.115/2004 ರ ತೀರ್ಪಿನ ವಿರುದ್ಧ ನಾನು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ದಾವಾ ಷೆಡ್ಯೂಲ್ ಆಸ್ತಿಯಲ್ಲಿರುವ ತೋಟದ ಮನೆಯ ಜಾಗದಲ್ಲಿ ಕುಲುಮೆ ನಡೆಸಲು ವಾದಿಗಳಿಂದ ನಾನು ಅನುಮತಿ ಪಡೆದುಕೊಂಡಿರುತ್ತೇನೆ ಎಂದರೆ ಸಾಕ್ಷಿಯು ಅದು ನಮ್ಮ ಜಾಗವಾದ್ದರಿಂದ ನಾನು ಅಲ್ಲಿ ಕುಲುಮೆ ಮನೆ ನಿರ್ಮಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಕುಲುಮೆ ಮನೆಯನ್ನು ಯಾವ ಇಸವಿಯಲ್ಲಿ ನಿರ್ಮಾಣ ಮಾಡಿದೆ ಎಂದು ಈಗ ನೆನಪಿಲ್ಲ. ನಾನು ವಾದಿಗಳಿಂದ ದಾವಾ ಷೆಡ್ಯೂಲ್ ಆಸ್ತಿಯ ತೋಟದ ಮನೆಯ ಜಾಗದಲ್ಲಿ ಕುಲುಮೆ ನಡೆಸಲು ಅನುಮತಿ ಪಡೆದು ಕ್ರಮೇಣ ದಾವಾ ಆಸ್ತಿಯ 15 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

5. ನಿಪಿ-12 ರಂತೆ ವಾದಿಗಳು ನನಗೆ ದಾವಾ ಷೆಡ್ಯೂಲ್ ಆಸ್ತಿಯಲ್ಲಿ ಕುಲುಮೆ ನಡೆಸಲು ನೀಡಿದ್ದ ಅನುಮತಿಯನ್ನು ರದ್ಧತಿ ಮಾಡಿ ಸದರಿ ಜಾಗವನ್ನು ಹಿಂತಿರುಗಿಸುವಂತೆ ನೋಟೀಸು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ನಿಪಿ-12 ನೋಟೀಸು ಜಾರಿಯಾದ ನಂತರ ದಾವಾ ಷೆಡ್ಯೂಲ್ ಆಸ್ತಿಯಲ್ಲಿ ಕುಲುಮೆ ನಡೆಸುವುದನ್ನು ನಿಲ್ಲಿಸದೇ ಇರುವುದರಿಂದ ಮತ್ತು 15 ಗುಂಟೆ ಒತ್ತುವರಿ ಜಾಗವನ್ನು ಹಿಂತಿರುಗಿಸದೇ ಇರುವುದರಿಂದ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

6. ನಿಡಿ-36/ಭಾವಚಿತ್ರ ದಲ್ಲಿರುವ ಮನೆ ಹಳೆಯ ಮನೆ. ನಿಡಿ-36 ರಲ್ಲಿರುವ ಹಳೆಯ ಮನೆಯನ್ನು ಕೆಡವಿ ಹೊಸ ಮನೆಯನ್ನು ನಿಡಿ-37 ರಲ್ಲಿ ಕಾಣುವಂತೆ ನಿರ್ಮಾಣ ಮಾಡಿರುತ್ತೇವೆ. ನಿಡಿ-37 ರಲ್ಲಿ ಕಾಣುವ ಆರ್.ಆರ್.ಸಿ ಮನೆ ಮತ್ತು ಪಕ್ಕದಲ್ಲಿರುವ ದನದ ಕೊಟ್ಟಿಗೆ ಸರ್ವೆ ನಂ.10 ರಲ್ಲಿ ಇದೆ. ಸರ್ವೆ ನಂ.9 ರಲ್ಲಿರುವ ಕುಲುಮೆ ಮನೆಯ ಭಾವ ಚಿತ್ರವನ್ನು ನಾನು ಈ ದಾವೆಯಲ್ಲಿ ಸಲ್ಲಿಸಿರುವುದಿಲ್ಲ. ಸಾಕ್ಷಿ ಮುಂದುವರಿದು, ಚಿಕ್ಕಮಗಳೂರು ನ್ಯಾಯಾಲಯದಲ್ಲಿ ಸಲ್ಲಿಸಿದ್ದ ದಾವೆಯಲ್ಲಿ ಭಾವ ಚಿತ್ರನೀಡಿದ್ದೆ ಎಂದು ನುಡಿಯುತ್ತಾರೆ.

7. ನಿಡಿ-36 ಮತ್ತು ನಿಡಿ-37 ಭಾವ ಚಿತ್ರಗಳನ್ನು ಶೃಂಗೇರಿಯ ರವಿ ಸ್ಟುಡಿಯೋದವರು ತೆಗೆದಿರುತ್ತಾರೆ. ನಿಡಿ-38 ಪ್ರಮಾಣ ಪತ್ರವನ್ನು ನಾನೇ ನೀಡಿರುತ್ತೇನೆ ಎಂದರೆ ಸರಿ. ನಿಡಿ-36 ಮತ್ತು ನಿಡಿ-37 ಭಾವ ಚಿತ್ರಗಳನ್ನು ಒಂದೇ ದಿನಾಂಕದಂದು ತೆಗೆದಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ವಾದಿಗಳಿಗೇ ಸೇರಿದ್ದು ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಆಸ್ತಿಯ ಮೇಲೆ ನನಗೆ ಯಾವುದೇ ರೀತಿಯ ಹಕ್ಕು, ಸ್ವಾಮ್ಯತೆ ಮತ್ತು ಆಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ಹೆಸರಿಗೆ ದಾವಾ ಷೆಡ್ಯೂಲ್ ಆಸ್ತಿಯ ಮಂಜೂರಾತಿ ಆದೇಶವನ್ನು ನಾವು ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಹಿ:

ಸಿ.ಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಃ

ಶೃಂಗೇರಿ.